## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಪೌರಾಡಳಿತ ನಿರ್ದೇಶನಾಲಯವನ್ನು ಬಲಪಡಿಸಲು ಹೆಚ್ಚುವರಿ ಹುದ್ದೆಗಳನ್ನು ಸೃಜನೆ/ಮರುನಿಯೋಜನೆ ಮೂಲಕ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ನಅಇ 159 ಎಂಎಲ್ಆರ್ 2013 ದಿನಾಂಕ:14.08.2018.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ:17620/ಡಿಎಂಎ/59/ಇಎಸ್‌ಟಿ/2016-17, ದಿನಾಂಕ:31.10.2018.

~ * * * * * * * * * ~

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ದಿನಾಂಕ:14.08.2018ರ ಆದೇಶದಲ್ಲಿ ರಾಜ್ಯದಲ್ಲಿನ 280 ನಗರ ಸ್ಥಳೀಯ ಸಂಸ್ಥೆಗಳ ಆಡಳಿತ ನಿರ್ವಹಣೆ, ಮೇಲುಸ್ತುವಾರಿ, ತಾಂತ್ರಿಕ ಕೆಲಸಗಳನ್ನು ಸುಗಮವಾಗಿ ನಿರ್ವಹಿಸಲು ಪೌರಾಡಳಿತ ನಿರ್ದೇಶನಾಲಯವನ್ನು ಬಲಪಡಿಸುವ ದೃಷ್ಟಿಯಿಂದ ಹಾಲಿ ಪೌರಾಡಳಿತ ನಿರ್ದೇಶನಾಲಯದಲ್ಲಿ ಅಸ್ತಿತ್ವದಲ್ಲಿರುವ 157 ಹುದ್ದೆಗಳಲ್ಲಿ 26 ಹುದ್ದೆಗಳನ್ನು ರದ್ದುಪಡಿಸಿ, ಉಳಿದ 131 ಹುದ್ದೆಗಳನ್ನು ಪುನರ್ ಉಪಯೋಗಿಸಿಕೊಂಡು (re-utilized) ಈ ಹುದ್ದೆಗಳ ಜೊತೆಗೆ ವಿವಿಧ ವೃಂದಗಳ 21 ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಮತ್ತು 49 ಹುದ್ದೆಗಳನ್ನು ಮಹಾನಗರಪಾಲಿಕೆಗಳಿಂದ ಮರುನಿಯೋಜನೆ ಮಾಡಿಕೊಂಡು ಒಟ್ಟು 201 ವಿವಿಧ ವೃಂದದ ಹುದ್ದೆಗಳನ್ನು ಸದರಿ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪೌರಾಡಳಿತ ನಿರ್ದೇಶನಾಲಯಕ್ಕೆ ಮಂಜೂರು ಮಾಡಿ ಸರ್ಕಾರವು ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರ ದಿನಾಂಕ:31.10.2018ರ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಪತ್ರದಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ 159 ಎಂಎಲ್ಆರ್ 2013 ದಿನಾಂಕ:14.08.2018ರ ಆದೇಶದಲ್ಲಿ ಒಟ್ಟು 201 ವಿವಿಧ ವೃಂದದ ಹುದ್ದೆಗಳನ್ನು ಮಂಜೂರು ಮಾಡಲಾಗಿದ್ದು, 201 ಹುದ್ದೆಗಳ ಪೈಕಿ ರದ್ದುಪಡಿಸುವ 26 ಹುದ್ದೆಗಳು, ಹೊಸದಾಗಿ ಸೃಜಿಸುವ 21 ಹುದ್ದೆಗಳು ಯಾವುದೆಂಬ ಬಗ್ಗೆಯಾಗಲಿ ಹಾಗೂ ಮರುನಿಯೋಜನೆ ಮಾಡಿಕೊಳ್ಳುವ 49 ಹುದ್ದೆಗಳನ್ನು ಯಾವ ಮಹಾನಗರಪಾಲಿಕೆಗಳಿಂದ ಗುರುತಿಸಲಾಗಿದೆ ಎಂಬ ಬಗ್ಗೆಯಾಗಲಿ ಸ್ಪಷ್ಟತೆ ಇರುವುದಿಲ್ಲ. ಈ ಬಗ್ಗೆ ಪರಿಷ್ಕರಿಸಿದ ಆದೇಶ ಹೊರಡಿಸಲು ಕೋರಿದ್ದಾರೆ. ಸರ್ಕಾರವು ಈ ಬಗ್ಗೆ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

Scanned by CamScanner

**ಸರ್ಕಾರದ ಆದೇಶ ಸಂಖ್ಯೆ:ನಅಇ 159 ಎಂಎಲ್ಆರ್ 2013(ಭಾಗ-1), ದಿನಾಂಕ:05-03-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಆದೇಶ ಸಂಖ್ಯೆ:ನಅಇ 159 ಎಂಎಲ್ಆರ್ 2013 ದಿನಾಂಕ:14.08.2018ರ ಆದೇಶದಲ್ಲಿ ಪೌರಾಡಳಿತ ನಿರ್ದೇಶನಾಲಯದಲ್ಲಿ ಅಸ್ತಿತ್ವದಲ್ಲಿದ್ದ 157 ಹುದ್ದೆಗಳಲ್ಲಿ 26 ಹುದ್ದೆಗಳನ್ನು ರದ್ದುಪಡಿಸಿ, ಉಳಿದ 131 ಹುದ್ದೆಗಳನ್ನು ಪುನರ್ ಉಪಯೋಗಿಸಿಕೊಂಡು (re-utilized) ಈ ಹುದ್ದೆಗಳ ಜೊತೆಗೆ ವಿವಿಧ ವೃಂದಗಳ 21 ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಮತ್ತು 49 ಹುದ್ದೆಗಳನ್ನು ಮಹಾನಗರಪಾಲಿಕೆಗಳಿಂದ ಮರುನಿಯೋಜನೆ ಮಾಡಿಕೊಂಡು ಒಟ್ಟು 201 ವಿವಿಧ ವೃಂದದ ಹುದ್ದೆಗಳನ್ನು ಮಂಜೂರು ಮಾಡಲಾಗಿದ್ದು, ರದ್ದುಪಡಿಸಿರುವ 26 ಹುದ್ದೆಗಳ ವಿವರಗಳನ್ನು ಅನುಬಂಧ-1 ರಲ್ಲಿ, ಹೊಸದಾಗಿ ಸೃಜಿಸಲಾದ 21 ಹುದ್ದೆಗಳ ವಿವರಗಳನ್ನು ಅನುಬಂಧ-2ರಲ್ಲಿ ಹಾಗೂ ಮಹಾನಗರಪಾಲಿಕೆಗಳಿಂದ ಮರುನಿಯೋಜನೆ ಮಾಡಿಕೊಂಡ 49 ಹುದ್ದೆಗಳ ವಿವರಗಳನ್ನು ಅನುಬಂಧ-3ರಲ್ಲಿ ವಿವರಿಸಿ, ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

5/3/19
(ಪಂಪನಗೌಡ ಮೇಲ್ಸೀಮೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
5/3/19

ಗೆ:

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
3. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು.
4. ನಗರ ಯೋಜನಾ ಇಲಾಖಾ ನಿರ್ದೇಶಕರು, ಬೆಂಗಳೂರು.
5. ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳು,
6. ಸಂಬಂಧಪಟ್ಟ ಎಲ್ಲಾ ಯೋಜನಾ ನಿರ್ದೇಶಕರುಗಳು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ.
7. ಆಯುಕ್ತರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಶಿವಮೊಗ್ಗ, ದಾವಣಗೆರೆ ಮತ್ತು ತುಮಕೂರು ಮಹಾನಗರಪಾಲಿಕೆ.
8. ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು,
9. ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ಪೌರಾಡಳಿತ ಇಲಾಖೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 & 9) ವಿಧಾನಸೌಧ, ಬೆಂಗಳೂರು.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned by CamScanner

ಆದೇಶ ಸಂಖ್ಯೆ:ನಅಇ 159 ಎಂಎಲ್ಆರ್ 2013(ಭಾಗ-1), ದಿನಾಂಕ:05.03.2019ಕ್ಕೆ ಅನುಬಂಧ-1

| ಅನುಬಂಧ-1 | | |
|---|---|---|
| ರದ್ದುಪಡಿಸಲಾದ ಹುದ್ದೆಗಳ ವಿವರ | | |
| ಕ್ರ ಸಂ. | ಹುದ್ದೆಗಳ ಹೆಸರು / ವಿವರ | ರದ್ದುಪಡಿಸಿದ ಹುದ್ದೆಗಳ ಸಂಖ್ಯೆ |
| 1 | Asst. Director (Eng) | 1 |
| 2 | Project Officer (NULM & HFA) | 1 |
| 3 | Development Officer | 1 |
| 4 | FBAS Coordinator | 1 |
| 5 | Research Officer | 1 |
| 6 | Asst. Director (Statistics) | 1 |
| 7 | Statistical Asst. | 1 |
| 8 | Typist | 4 |
| 9 | Data Entry Operator | 10 |
| 10 | Group - D | 5 |
| | **TOTAL** | 26 |

5/3/19
(ಪಂಪನಗೌಡ ಮೇಲ್ಸೀಮೆ)
ಸರ್ಕಾರದ ಅಧೀನ ಕಾರ್ಯದರ್ಶಿ.
ನಗರಾಭಿವೃದ್ಧಿ ಇಲಾಖೆ.
5/3/19

Scanned by CamScanner